# ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ ಹೂವಿನಹಡಗಲಿ

## ಅಸಲು ದಾವೆ ಸಂಖ್ಯೆಃ 50/2015

**ದಿನಾಂಕಃ 29ನೇ ಜುಲೈ 2015**

ಉಪಸ್ಥಿತರುಃ ಶ್ರೀ ಯಮನಪ್ಪ ಕರೆಹನುಮಂತಪ್ಪ, ಬಿ.ಎ.ಎಲ್.ಎಲ್.ಬಿ.
ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೂವಿನಹಡಗಲಿ.

**ವಾದಿ :** ಶ್ರೀಮತಿ ಅನೀಲಮ್ಮಾ ಗಂಡ : ರಾಮಣ್ಣ ಗಂಜಿ, ವಯಸ್ಸು 54 ವರ್ಷ, ಕೃಷಿ ಕೆಲಸ ಮತ್ತು ಮನೆಕೆಲಸ, ವಾಸ : ದಾಸನಹಳ್ಳಿ ಗ್ರಾಮ, ಹೂವಿನಹಡಗಲಿ ತಾಲೂಕು, ಬಳ್ಳಾರಿ ಜಿಲ್ಲೆ.

(ಶ್ರೀ ಡಿ ಎಂ ಎ ಮತ್ತು ಎಂ ಎಸ್ ಎ ವಾದಿ ಪರ ವಕೀಲರು)

ವಿರುದ್ಧ

**ಪ್ರತಿವಾದಿಗಳು :** ಶ್ರೀ ಬಸವರಾಜ ತಂದೆ : ಕಲ್ಲಬಸಪ್ಪ ಇಟಗಿ, ವಯಸ್ಸು 60 ವರ್ಷ, ವ್ಯವಸಾಯ, ವಾಸ : ದಾಸನಹಳ್ಳಿ ಗ್ರಾಮ, ಹೂವಿನಹಡಗಲಿ ತಾಲುಕು, ಬಳ್ಳಾರಿ ಜಿಲ್ಲೆ ಮತ್ತು ಇತರರು

(ಶ್ರೀ ಬಿ ಎಸ್, ಪ್ರತಿವಾದಿ ನಂ : 01 ಮತ್ತು 02 ಪರ ವಕೀಲರು)
(ಪ್ರತಿವಾದಿ ನಂ : 03 ಮತ್ತು 04 ಏಕತರ್ಫಿ ಇರುತ್ತಾರೆ)
(ಶ್ರೀ ಎನ್ ವಿ ಸಿ ಪ್ರತಿವಾದಿ ನಂ : 05 ಮತ್ತು 06 ರ ಪರ ವಕೀಲರು)

## ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯ ಮೇಲೆ ಆದೇಶ

ವಾದಿ ಪರ ವಕೀಲರು ಕ್ರಮಾದೇಶ 39 ನಿಯಮ 1 ಮತ್ತು 2 ರಲ್ಲಿ ಅರ್ಜಿಯನ್ನು ಸಲ್ಲಿಸಿ ಪ್ರತಿವಾದಿಗಳಾಗಲಿ ಅಥವಾ ಅವರ ತರ್ಫಿನವರು ಆಗಲಿ ದಾವಾಆಸ್ತಿಯ ಮೇಲೆ ಯಾವುದೇ ರೀತಿಯ ಋಣಭಾರಗಳನ್ನು ಸೃಷ್ಟಿಸದಂತೆ/ ಪರಭಾರೆ/ ಮಾರಾಟ/ ಯಾವುದೇ ರೀತಿ ಹಕ್ಕು ವರ್ಗಾವಣೆ ಮಾಡದಂತೆ ತಾತ್ಕಾಲಿಕ ನಿರ್ಭಂಧಕಾಜ್ಞೆ ಮೂಲಕ ನಿರ್ಬಂಧಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾರೆ.

ಅರ್ಜಿಯ ಸಂಗಡ ವಾದಿ ಪ್ರಮಾಣಪತ್ರ ಸಲ್ಲಿಸಿ ಅವರು ತಮ್ಮ ಪ್ರಮಾಣಪತ್ರದಲ್ಲಿ ದಾವಾಆಸ್ತಿಗಳು ವಾದಿ ಮತ್ತು ಪ್ರತಿವಾದಿ ನಂ : 1 ರಿಂದ 04 ರವರ ಪಿತ್ರಾರ್ಜಿತ ಆಸ್ತಿಗಳಾಗಿದ್ದು

ವಾದಿ ಮತ್ತು ಪ್ರತಿವಾದಿಯರು ಹಿಂದೂ ಜಂಟಿ ಕುಟುಂಬದ ಸದಸ್ಯರಾಗಿದ್ದು ದಾವಾಆಸ್ತಿಗಳನ್ನು ಜಂಟಿಯಾಗಿ ಅನುಭೋಗ ಮಾಡುತ್ತಿದ್ದು ವಾದಿ ಮತ್ತು ಪ್ರತಿವಾದಿ ನಂ ಃ 01 ರಿಂದ 4 ರವರ ನಡುವೆ ದಾವಾಆಸ್ತಿಗೆ ಸಂಬಂಧಿಸಿದಂತೆ ಪಾಲುವಿಭಾಗ ಆಗಿರುವುದಿಲ್ಲ. ಪ್ರತಿವಾದಿಯರು ತಮ್ಮ ಹೆಸರಿನಲ್ಲಿರುವ ಕಂದಾಯ ದಾಖಲಾತಿಗಳನ್ನು ದುರುಪಯೋಗಪಡಿಸಿಕೊಂಡು ಮಾರಾಟ ಮಾಡುವ ಪ್ರಯತ್ನ ಮಾಡುತ್ತಿದ್ದು ನ್ಯಾಯಾಲಯ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಂಡಿರುತ್ತಾರೆ.

ಪ್ರತಿವಾದಿ ನಂ. 5 ಮತ್ತು 06 ರವರು ಮೇಮೋ ಸಲ್ಲಿಸಿ ಪ್ರತಿವಾದ ಪತ್ರದಲ್ಲಿರುವ ಸಂಗತಿಗಳನ್ನು ಮಧ್ಯಂತರ ಅರ್ಜಿ ನಂ ಃ 1 ಕ್ಕೆ ತಕರಾರು ಅಂತ ಪರಿಗಣಿಸಬೇಕು ಅಂತ ನಿವೇದಿಸಿಕೊಂಡಿರುತ್ತಾರೆ. ಅವರು ತಮ್ಮ ಪ್ರತಿವಾದ ಪತ್ರದಲ್ಲಿ ವಾದಿಯ ದಾವೆ ಕಾಲಮಿತಿ ಇರುವುದಿಲ್ಲ. ನ್ಯಾಯಾಲಯದ ಶುಲ್ಕವನ್ನು ಭರಣ ಮಾಡಿರುವುದಿಲ್ಲ. ಅವಶ್ಯಕ ಪಕ್ಷಗಾರರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಈ ನ್ಯಾಯಾಲಯಕ್ಕೆ ದಾವೆಯನ್ನು ವಿಚಾರಣೆ ಮಾಡುವ ಅಧಿಕಾರ ಇರುವುದಿಲ್ಲ. ಮುಂದುವರೆದು ಸದ್ರಿ ಪ್ರತಿವಾದಿಯರು ದಾವಾಶೆಡ್ಯೂಲ್ ಬಿ ಮತ್ತು ಸಿ ಜಮೀನುಗಳನ್ನು ಪ್ರತಿವಾದಿ ನಂ ಃ 01, 02 ಮತ್ತು 04 ರವರ ಕಡೆಯಿಂದ 1986-87 ನೇ ಸಾಲಿನಲ್ಲಿ ನೊಂದಾಯಿತ ಪತ್ರ ಖರೀದಿ ಮಾಡಿದ್ದು ಮತ್ತು ಕಂದಾಯ ದಾಖಲಾತಿ ಸಹ ಪ್ರತಿವಾದಿ ನಂ ಃ 05 ರವರ ಹೆಸರಿನಲ್ಲಿ ಇದ್ದು ಪ್ರತಿವಾದಿ ನಂ ಃ 05 ರವರು ದಾವಾಆಸ್ತಿಯ ಸ್ವಾಧೀನದಲ್ಲಿ ಇದ್ದು ಮತ್ತು ಪ್ರತಿವಾದಿ ನಂ ಃ 05 ಮತ್ತು 06 ರವರು ದಿನಾಂಕ ಃ 09-03-2010 ರಂದು ಹಿರಿಯರ ಸಮಕ್ಷಮ ಮೇಲೆ ಹೇಳಿದ ದಾವಾಆಸ್ತಿಗಳನ್ನು ಪಾಲುವಿಭಾಗ ಮಾಡಿಕೊಂಡಿದ್ದು ವಾದಿಯ ಸಲ್ಲಿಸಿದ ದಾವೆಯು ಊರ್ಜಿತವಾಗಿರುವುದಿಲ್ಲ. ಆ ಕಾರಣದಿಂದ ಅರ್ಜಿಯನ್ನು ತಿರಸ್ಕರಿಸಬೇಕೆಂದು ಕೇಳಿಕೊಂಡಿರುತ್ತಾರೆ.

ಉಭಯ ಪಕ್ಷಕಾರರ ವಕೀಲರಿಂದ ವಾದವನ್ನು ಆಲಿಸಲಾಯಿತು. ಕಡತವನ್ನು ಪರಿಶೀಲಿಸಲಾಯಿತು.

ನನ್ನ ಪರಿಗಣನೆಗೆ ಈ ಕೆಳಗಿನ ಅಂಶಗಳು ಉದ್ಭವವಾದವು.

1) ವಾದಿ ಮೇಲ್ನೋಟಕ್ಕೆ ದಾವೆ ಮತ್ತು ತಮ್ಮ ಪರವಾಗಿದೆ ಎಂದು ಸಾಬೀತುಪಡಿಸುವರೇ ?

2) ಅನುಕೂಲತೆ ಒಲವು ವಾದಿಯ ಪರವಾಗಿ ಇದೆ ?

3) ಒಂದು ವೇಳೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡದಿದ್ದರೆ ವಾದಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ ?

4) ಏನು ಆದೇಶ?

ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

ಅಂಶ ನಂಃ 1) ಭಾಗಶಃ ಸಕಾರಾತ್ಮಕವಾಗಿ

ಅಂಶ ನಂಃ 2) ಭಾಗಶಃ ಸಕಾರಾತ್ಮಕವಾಗಿ

ಅಂಶ ನಂಃ 3) ಭಾಗಶಃ ಸಕಾರಾತ್ಮಕವಾಗಿ

ಅಂಶ ನಂಃ 4) ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಂದಾಗಿ

## ಕಾರಣಗಳು

ಅಂಶ ನಂಃ 1 ರಿಂದ 3 ಈ ಎಲ್ಲಾ ಅಂಶಗಳು ಒಂದಕ್ಕೊಂದು ಅಂತರ ಸಂಬಂಧ ಹೊಂದಿರುವುದರಿಂದ ಪುನರುಕ್ತಿ ನಿವಾರಣೆ ಸಲುವಾಗಿ ಏಕಕಾಲಕ್ಕೆ ಚರ್ಚೆ ತೆಗೆದುಕೊಳ್ಳಲಾಗಿದೆ.

ವಾದಿ ಈ ದಾವೆಯನ್ನು ಪ್ರತಿವಾದಿಯರ ವಿರುದ್ದ ಪಾಲುವಿಭಾಗ ಕೋರಿ ಸಲ್ಲಿಸಿದ್ದು ಇರುತ್ತದೆ. ವಾದಿಯು ತನ್ನ ಪ್ರಮಾಣಪತ್ರದಲ್ಲಿ ದಾವಾಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಇದ್ದು ವಾದಿ ಮತ್ತು ಪ್ರತಿವಾದಿ ನಂ ಃ 01 ಮತ್ತು 04 ರವರು ಜಂಟಿ ಹಿಂದೂ ಕುಟುಂಬದ ಸದಸ್ಯರಾಗಿದ್ದು ವಾದಿ ಮತ್ತು ಪ್ರತಿವಾದಿ ನಂ ಃ 01 ರಿಂದ 04 ರವರ ನಡುವೆ ಪಾಲುವಿಭಾಗ ಆಗಿರುವುದಿಲ್ಲ. ಪ್ರತಿವಾದಿಯರು ಕಂದಾಯ ದಾಖಲಾತಿಯಲ್ಲಿ ತಮ್ಮ ಹೆಸರು ಇರುವುದಕ್ಕೆ ನೋಡಿ ದುರುಪಯೋಗಪಡಿಸಿಕೊಂಡು

ದಾವಾಆಸ್ತಿಯನ್ನು ಮಾರಾಟ ಮಾಡಲು ಪ್ರಯತ್ನ ಮಾಡುತ್ತಿದ್ದು ಆ ಕಾರಣದಿಂದ ಅರ್ಜಿಯನ್ನು ಪುರಸ್ಕರಿಸಲು ಕೇಳಿಕೊಂಡಿರುತ್ತಾರೆ.

ಪ್ರತಿವಾದಿ ನಂ ಃ 01 ಮತ್ತು 02 ತಮ್ಮ ವಕೀಲರ ಮೂಲಕ ಹಾಜರಾಗಿದ್ದು ಆದರೆ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಮತ್ತು ಮಧ್ಯಂತರ ಅರ್ಜಿ ನಂ ಃ 01 ಕ್ಕೆ ತಕರಾರು ಸಲ್ಲಿಸಿರುವುದಿಲ್ಲ. ಪ್ರತಿವಾದಿ ನಂ ಃ 03 ಮತ್ತು 04 ರವರು ಏಕತರ್ಫಿ ಆಗಿ ಇರುತ್ತಾರೆ. ಪ್ರತಿವಾದಿ ನಂ ಃ 05 ಮತ್ತು 06 ಮಾತ್ರ ತಕರಾರು ಸಲ್ಲಿಸಿ ತಾವು ದಾವಾ ಬಿ ಮತ್ತು ಸಿ ಶೆಡ್ಯೂಲ್ ಆಸ್ತಿಗಳನ್ನು 1986-87 ನೇ ಇಸ್ವೀಯಲ್ಲಿ ಖರೀದಿ ಮಾಡಿದ್ದು ದಾವೆಯು ಕಾಲಮಿತಿ ಇರುವುದಿಲ್ಲ. ಅರ್ಜಿಯನ್ನು ತಿರಸ್ಕರಿಸಬೇಕೆಂದು ಕೇಳಿಕೊಂಡಿರುತ್ತಾರೆ.

ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲನೆ ಮಾಡಿದಾಗ ದಾವಾ ಬಿ ಶೆಡ್ಯೂಲ್ ಸರ್ವೆ ನಂ ಃ 218/ಬಿ2 ಎ2 ವಿಸ್ತೀರ್ಣ 4.75 ಎಕರೆ ಪೈಕಿ 2.37 ಎಕರೆ ಇದ್ದು ಇದು 03ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಇದ್ದು ಸಿ ಶೆಡ್ಯೂಲ್ ಆಸ್ತಿ ಸರ್ವೆ ನಂ ಃ 166 ವಿಸ್ತೀರ್ಣ 8.56 ಎಕರೆ 01ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ಸದ್ರಿ ಜಮೀನುಗಳು ವಾದಿ ಮತ್ತು ಪ್ರತಿವಾದಿ ನಂ ಃ 1 ರಿಂದ 4 ರವರ ಪೂರ್ವಜರಿಂದ ಬಂದ ಆಸ್ತಿಗಳಾಗಿರುತ್ತವೆ. ವಾದಿ ಮತ್ತು ಪ್ರತಿವಾದಿ ನಂ ಃ 01 ರಿಂದ 04 ರವರು ಹಿಂದು ಜಂಟಿ ಕುಟುಂಬದ ಸದಸ್ಯರಾಗಿದ್ದು ವಾದಿ ಮತ್ತು ಪ್ರತಿವಾದಿಯರ ನಡುವೆ ದಾವಾ ಬಿ ಮತ್ತು ಸಿ ಶೆಡ್ಯೂಲ್ ಆಸ್ತಿಗಳ ಬಗ್ಗೆ ಉಭಯತರಲ್ಲಿ ಪಾಲುವಿಭಾಗ ಆಗಿರುವುದಿಲ್ಲ ಮತ್ತು ಪ್ರತಿವಾದಿ ನಂ ಃ 01 ರಿಂದ 4 ರವರು ವಾದಿ ಹೇಳಿದಂತ ಸಂಗತಿಗಳನ್ನು ಅಲ್ಲಗಳೆದಿರುವುದಿಲ್ಲ.

ದಾವಾ ಎ ಶೆಡ್ಯೂಲ್ ಸರ್ವೆ ನಂ ಃ 159 ಬಿ ವಿಸ್ತೀರ್ಣ 7 ಎಕರೆ ಇದು 05ನೇ ಪ್ರತಿವಾದಿ 1986-87 ನೇ ಸಾಲಿನಲ್ಲಿ ನೊಂದಾಯಿತ ಖರೀದಿ ಪತ್ರದ ಮೂಲಕ ಖರೀದಿ ಮಾಡಿದ್ದು ಖರೀದಿಮಾಡಿದನಂತರ 05ನೇ ಪ್ರತಿವಾದಿಯ ಹೆಸರು ಕಂದಾಯ ದಾಖಲಾತಿಗಳಲ್ಲಿ ನಮೂದು ಆಗಿದ್ದು

ಇರುತ್ತದೆ. ಸದ್ರಿ ಜಮೀನು ವಾದಿ ಮತ್ತು ಪ್ರತಿವಾದಿ ನಂ : 01 ರಿಂದ 04 ರವರ ಜಂಟಿ ಕುಟುಂಬದ ಆಸ್ತಿ ಎನ್ನುವುದರ ಬಗ್ಗೆ ಈ ಹಂತದಲ್ಲಿ ನಿರ್ಣಯಕ್ಕೆ ಬರಲು ಸಾಧ್ಯವಾಗುವುದಿಲ್ಲ, ಇದರ ಕುರಿತು ಸಾಕ್ಷಿ ವಿಚಾರಣೆಗಳ ಅವಶ್ಯಕತೆ ಇದೆ.

ದಾವಾ ಬಿ ಮತ್ತು ಸಿ ಶೆಡ್ಯೂಲ್ ಆಸ್ತಿಗಳು ಹಿಂದೂ ಜಂಟಿ ಕುಟುಂಬದ ಆಸ್ತಿಗಳಾಗಿದ್ದು ವಾದಿ ಮತ್ತು ಪ್ರತಿವಾದಿ ನಂ : 01 ರಿಂದ 04 ರ ನಡುವೆ ಪಾಲುವಿಭಾಗ ಆಗಿರುವುದಿಲ್ಲ. ವಾದಿ ಮತ್ತು ಪ್ರತಿವಾದಿ ನಂ : 01 ರಿಂದ 04 ರವರು ದಾವಾಆಸ್ತಿಯಲ್ಲಿ ಸಮಾನವಾದ ಹಕ್ಕನ್ನು ಹೊಂದಿದ್ದು ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲನೆ ಮಾಡಿದಾಗ ದಾವೆಯು ಮೇಲ್ನೋಟಕ್ಕೆ ವಾದಿಯ ಪರವಾಗಿ ಇದ್ದು ಅನುಕೂಲತೆ ಒಲವು ಸಹ ವಾದಿಯ ಪರವಾಗಿರುತ್ತದೆ. ದಾವಾ ಬಿ ಮತ್ತು ಸಿ ಶೆಡ್ಯೂಲ್ ಆಸ್ತಿಗಳನ್ನು ಪ್ರತಿವಾದಿ ನಂ : 01 ರಿಂದ 04 ರವರು ಮಾರಾಟ ಮಾಡಿದರೆ ವಾದಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ. ದಾವಾ ಎ ಶೆಡ್ಯೂಲ್ ಆಸ್ತಿಗಳನ್ನು ಮಾರಾಟ ಮಾಡಿದರೆ ವಾದಿಗೆ ತುಂಬಲಾರದ ನಷ್ಟ ಉಂಟಾಗುವುದಿಲ್ಲ ಎಂದು ಅಭಿಪ್ರಾಯಕ್ಕೆ ಬಂದು ಅಂಶ ನಂ. 01 ರಿಂದ 03 ಕ್ಕೆ ಭಾಗಶಃ ಸಕಾರಾತ್ಮಕವಾಗಿ ಉತ್ತರಿಸುತ್ತೇನೆ. ಆದ್ದರಿಂದ ಈ ಕೆಳಕಂಡಂತೆ ಆದೇಶ ಮಾಡುತ್ತಿದ್ದೇನೆ.

## ಆದೇಶ

ಮಧ್ಯಂತರ ಅರ್ಜಿ ನಂ: 01 ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ವಾದಿ ಪರ ವಕೀಲರು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಪ್ರತಿವಾದಿ ನಂ : 01 ರಿಂದ 04 ಆಗಲಿ ಅಥವಾ ಅವರ ತರ್ಫೆನವರು ಆಗಲಿ ದಾವಾಆಸ್ತಿಯ ಮೇಲೆ ಯಾವುದೇ ರೀತಿಯ ಋಣಭಾರ ಮಾಡದಂತೆ ಪರಭಾರೆ, ಮಾರಾಟ ಮಾಡದಂತೆ ದಾವೆ ನಿಕಾಲೆ ಆಗುವವರೆಗೆ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಮೂಲಕ ನಿರ್ಬಂಧಿಸಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ಕೊಟ್ಟ ಉಕ್ತಲೇಖನವನ್ನು ಬೆರಳಚ್ಚು-ನಕಲುಗಾರರ ಮೂಲಕ ಬೆರಳಚ್ಚು ಮಾಡಿಸಲಾಯಿತು. ತದನಂತರ ತಿದ್ದಿ ಸರಿಪಡಿಸಿ ತೆರೆದ ನ್ಯಾಯಾಲಯದಲ್ಲಿ ಈ ದಿನಾಂಕ: 29-07-2015 ರಂದು ಆದೇಶವನ್ನು ಘೋಷಿಸಲಾಯಿತು)

ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.,ಹೂವಿನಹಡಗಲಿ